ದಿನಾಂಕಃ 27-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ-</u> 2 ನೇ ಎದುರುದಾರ ಪರ ಶ್ರೀ ಎನ.ಡಿ ವಕೀಲರಿಂದ

ನನ್ನ ಸ್ವಂತ ಊರು ಕೆ.ಬಿ.ತಿಮ್ಮಾಪುರ. ನಾನು 1 ನೇ ಎದುರುದಾರರ ವಾಹನದ ಚಾಲಕನಾಗಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ವಾಹನ ಚಾಲನಾ ಪರವಾನಿಗೆ ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನ್ನ ಮತ್ತು 1 ನೇ ಎದುರುದಾರರ ನಡುವೆ ಕಾರ್ಮಿಕ ಮತ್ತು ಮಾಲೀಕರ ಸಂಬಂಧ ಇರುವ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ. 1 ನೇ ಎದುರುದಾರ ನನಗೆ ಪ್ರತಿ ತಿಂಗಳು ರೂ. 25,000/- ವೇತನ ಹಾಗೂ ಪ್ರತಿ ದಿನ ರೂ. 500/- ಭತ್ಯೆ ಕೊಡುತ್ತಿದ್ದರು ಎಂದು ಹೇಳಿದ್ದು ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಾನು 1 ನೇ ಎದುರುದಾರರ ಹತ್ತಿರ ಕೆಲಸ ಮಾಡದಿರುವ ಕಾರಣ ಆ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಲಾರಿಯ ಸ್ಟೇರಿಂಗ್ ಬಲಬದಿಯಲ್ಲಿ ಇರುತ್ತದೆ ಎಂದರೆ ಸರಿ. ಲಾರಿಯ ಎಡಬದಿಯಲ್ಲಿ ಕ್ಲೀನರ್ ಕುಳಿತುಕೊಳ್ಳಲು ವ್ಯವಸ್ಥೆ ಇರುತ್ತದೆ ಎಂದರೆ ಸರಿ. ಅಂತಿಮ ವರದಿಯಲ್ಲಿ ಲಾರಿಯ ಎಡಭಾಗದಲ್ಲಿ ಜಖಂ ಆಗಿತ್ತು ಎಂದು ಬರೆಯಲಾಗಿದೆ ಎಂದರೆ ಮುಂಭಾಗದ ಕ್ಯಾಬಿನ ಸಂಪೂರ್ಣ ಜಖಂ ಆಗಿತ್ತು. ಮಿಪ್ರಲ್ ಅಟೋ ಗ್ಯಾರೇಜರವರಿಗೆ ಕೊಟ್ಟಂತಹ ಪತ್ರದಲ್ಲಿ ನಾನು ಚಾಲನೆ ಮಾಡುತ್ತಿದ್ದ ವಾಹನದ ಕ್ಯಾಬಿನಿನ ಎಡಭಾಗದ ಮುಖ್ಯ ಗಾಜು ಒಡೆದು ಎಡಭಾಗವು ಹಾನಿಯಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿ, ಆದರೆ ಎಡಭಾಗದ ಗಾಜು ಒಡೆದಿದ್ದರೂ ಮುಂಭಾಗದ

ಕ್ಯಾಬಿನ ಸಂಪೂರ್ಣ ಹಾನಿಯಾಗಿತ್ತು. ವಾಹನದ ಮುಂಭಾಗದ ಕ್ಯಾಬಿನ ಸಂಪೂರ್ಣ ಹಾನಿಯಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಆ ದಿನ ನಾನು 1 ನೇ ಎದುರುದಾರರ ವಾಹನದ ಚಾಲಕ ಆಗಿರದಿದ್ದರೂ ಸಹ ವಾಹನದ ಚಾಲಕನಾಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಅಪಘಾತದ ನಂತರ ನನ್ನನ್ನು ಚಿಕಿತ್ಸೆಗಾಗಿ ಧೂಲೇ ಜಿಲ್ಲಾ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ನನಗೆ ಒಂದು ಇಂಜಕ್ಷನ್ ಕೊಟ್ಟು ಕ್ಷ-ಕಿರಣ ಮಾಡಿ ಆನಂತರ ನನ್ನನ್ನು ಬಿಡುಗಡೆ ಮಾಡಿದ್ದು ನಾನು ಅಲ್ಲಿಂದ ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಗೆ ಬಂದು ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ. ಧೂಲೇ ಆಸ್ಪತ್ರೆಯಲ್ಲಿ ಇರುವಾಗ ನನ್ನನ್ನು ನೋಡಿಕೊಳ್ಳುವವರು ಯಾರೂ ಇಲ್ಲದಿರುವಾಗ ಮೂರು ದಿನ ಅಲ್ಲಿ ನನಗೆ ನೋವಿಗೆ ಇಂಜಕ್ಷನ್ ಹಾಗೂ ಮಾತ್ರೆ ಕೊಟ್ಟಿದ್ದರು ಆನಂತರ ನನ್ನ ಕುಟುಂಬದವರು ಅಲ್ಲಿ ಬಂದು ನನ್ನನ್ನು ಕೀಮ್ಸ ಆಸ್ಪತ್ರೆಗೆ ಕರೆದುಕೊಂಡು ಬಂದರು.

ನಾನು ಕೀಮ್ಸ ಆಸ್ಪತ್ರೆಯಲ್ಲಿ 14 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದು ಬಿಡುಗಡೆಗೊಂಡು ಆನಂತರ 14 ದಿನ ಹೋಮ್ ಕ್ವಾರಂಟೈನದಲ್ಲಿ ಇದ್ದೆ. ಹೋಮ್ ಕ್ವಾರಂಟೈನ ಅವಧಿ ಮುಗಿದ ನಂತರ ನಾನು ಮತ್ತೇ ಕೀಮ್ಸ ಆಸ್ಪತ್ರೆಗೆ ದಾಖಲಾಗಿದ್ದು ಆಗ ಅಲ್ಲಿ ನನಗೆ ಚಿಕಿತ್ಸೆ ಕೊಟ್ಟು ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಕೀಮ್ಸ ಆಸ್ಪತ್ರೆಯಲ್ಲಿ ಮಾಡಿದ ಶಸ್ತ್ರಚಿಕಿತ್ಸೆ ಫಲಕಾರಿ ಆಗದಿರುವ ಕಾರಣ ನಾನು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಹೋಗಿ ಅಲ್ಲಿ ಶಸ್ತ್ರಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಕೀಮ್ಸ ಆಸ್ಪತ್ರೆಯಲ್ಲಿ ಮಾಡಿದ ಶಸ್ತ್ರಚಿಕಿತ್ಸೆ ಫಲಕಾರಿ ಆಗಿರುವುದಿಲ್ಲ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ

ಎಂದರೆ ಸರಿ. ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ದಾಖಲೆಗಳನ್ನು ಹಾಜರುಪಡಿಸದಿದ್ದರೂ ಸಹ ಹಾಜರುಪಡಿಸಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಹಾವೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಪಡೆದ ಚಿಕಿತ್ಸೆ ಸಹ ಸರಿ ಹೋಗದಿರುವ ಕಾರಣ ನಾನು ಹಾವೇರಿಯ ಹೆಗ್ಗೇರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಹೆಗ್ಗೇರಿ ಆಸ್ಪತ್ರೆಯ ವೈಧ್ಯರು ಎಲುಬು ಮೂಳೆ ತಜ್ಞರು ಅಲ್ಲ ಎಂದರೆ ಸರಿ. ಹೆಗ್ಗೇರಿ ಆಸ್ಪತ್ರೆಗೆ ಗಯಾ, ಅಮಿತ ಮತ್ತು ಚುಚ್ಚಾಳ ಎಂಬ ವೈಧ್ಯರು ಹೊರಗಡೆಯಿಂದ ಬಂದು ನನಗೆ ಚಿಕಿತ್ಸೆ ಕೊಟ್ಟಿರುತ್ತಾರೆ. ಈ ವಿಷಯವನ್ನು ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ನಿಪಿ 26 ರಲ್ಲಿ ಸದರಿ ವೈಧ್ಯರ ಹೆಸರುಗಳು ಹಾಗೂ ಅವರ ಸಹಿಗಳು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಡಾಃ ಅಮಿತ ರವರು ನನಗೆ ಯಾವುದೇ ಚಿಕಿತ್ಸೆ ಕೊಡದಿದ್ದರೂ ಸಹ ನಾನು ಹೆಗ್ಗೇರಿ ಆಸ್ಪತ್ರೆಯ ಲೆಟರಹೆಡನಲ್ಲಿ ಡಾಃ ಅಮಿತರವರಿಂದ ಸುಳ್ಳು ಬಿಡುಗಡೆ ಪತ್ರ ಬರೆಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

ನಾನು ಅಂಗನ್ಯೂನ್ಯತೆ ಪ್ರಮಾಣಪತ್ರ ಪಡೆಯಲು ಡಾಃ ಗಯಾ, ಅಮಿತ ಮತ್ತು ಚುಚ್ಚಾಳ ರವರನ್ನು ಕೇಳಿದ್ದೆ. ಅಂಗನ್ಯೂನ್ಯತೆ ಪ್ರಮಾಣಪತ್ರವನ್ನು ಡಾಃ ಗಾಯ ಹಾಗೂ ಅಮಿತ ರವರು ಕೊಟ್ಟಿರುತ್ತಾರೆ. ನಿಪಿ 22 ರ ಪ್ರಕಾರ ನಾನು ಅಂಗನ್ಯೂನ್ಯತೆ ಪ್ರಮಾಣಪತ್ರ ಪಡೆಯಲು ಮಾತ್ರ ಡಾಃ ಚುಚ್ಚಾಳರವರ ಹತ್ತಿರ ಹೋಗಿದ್ದೆ ಆದರೆ ಅವರಿಂದ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಚಿಕಿತ್ಸೆ ಪಡೆದಿರುತ್ತೇನೆ. ನಾನು ಡಾಃ ಚುಚ್ಚಾಳರವರಿಂದ ಯಾವುದೇ ಚಿಕಿತ್ಸೆ ಪಡೆಯದಿದ್ದರೂ ಸಹ ಸುಳ್ಳು ಹೇಳುತ್ತಿದ್ದೆನೆ

ಎಂದರೆ ಸರಿಯಲ್ಲ. ನನಗೆ ಆದಂತಹ ಗಾಯಗಳಿಗೂ ಅಪಘಾತಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಎಡಗಾಲು 4 ರಿಂದ 6 ಸೆಂಟಿ ಮೀಟರ ಚಿಕ್ಕದಾಗಿದೆ ಎಂದು ಹೇಳಿದ್ದು ಅದು ಅಪಘಾತದಿಂದ ಆದಂತಹ ಗಾಯದಿಂದ ಅಲ್ಲ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ವೈಧ್ಯಕೀಯ ಬಿಲ್ಲಗಳಲ್ಲಿ ಹಣ ಪಾವತಿ ಮಾಡಿದ ಬಗ್ಗೆ ಬರೆದಿಲ್ಲ ಹಾಗೂ ಹಣ ಪಡೆದವರ ಸಹಿ ಇಲ್ಲ ಎಂದರೆ ಸರಿಯಲ್ಲ. ಕೇಸಿಗೆ ಅನುಕೂಲ ಆಗುವಂತೆ ವೈಧ್ಯಕೀಯ ಬಿಲ್ಲಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೆನೆ ಎಂದರೆ ಸರಿಯಲ್ಲ. ನನಗೆ ವಾಹನ ಚಾಲನೆ ಮಾಡಲು ಈಗ ಆಗುವುದಿಲ್ಲ ಎಂದು ನಾನು ನನ್ನ ವಾಹನ ಚಾಲನಾ ಪರವಾನಿಗೆಯನ್ನು ಆರಟಿಓ ಕಚೇರಿಗೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಅರ್ಜಿಯೊಂದಿಗೆ ಚಾಲನಾ ಪರವಾನಿಗೆ ಆರಟಿಓ ಕಚೇರಿಗೆ ಸಲ್ಲಿಸಲು ತೊಂದರೆ ಇತ್ತೇ ಎಂಬ ಪ್ರಶ್ನೆಗೆ ಸಾಕ್ಷಿಯು ವಾಹನ ಚಾಲನೆ ಮಾಡಲು ಹಾಗೂ ಓಡಾಡಲು ಆಗುತ್ತಿಲ್ಲ ಎಂದು ನುಡಿದಿದ್ದಾರೆ.

ನಾನು ನನಗೆ ಅನುಕೂಲ ಆಗುವಂತೆ ಮರಾಠಿ ಭಾಷೆಯಲ್ಲಿರುವ ದಾಖಲೆಗಳನ್ನು ಕನ್ನಡ ಭಾಷೆಗೆ ಭಾಷಾಂತರ ಮಾಡಿಸಿದ್ದೆನೆ ಎಂದರೆ ಸರಿಯಲ್ಲ. ನಾನು ಯಾವತ್ತೂ 1 ನೇ ಎದುರುದಾರರ ವಾಹನ ಚಾಲಕನಾಗಿ ಕೆಲಸ ಮಾಡದಿದ್ದರೂ ಸಹ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ಸದರಿ ಸಾಕ್ಷಿದಾರರ ಸಾಕ್ಷ್ಯವನ್ನು ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)